SRI D. DEVARAJ URS.—The actual position is this. Many of those officers who came from erstwhile Hyderabad Districts have opted to the service Rules governing here. It appears that only one gentleman has applied for extending this concession and we have stated that it is not possible.

ಶ್ರೀ ಕೋಣಂದೂರು ಲಿಂಗಪ್ಪ : ಸ್ವಾಮಿ, ಮಲೇನಾಡಿನ ಪ್ರದೇಶಕ್ಕೆ ಈ ಬಗ್ಗೆ ಒಂದು ವಿಶೇಷವಾದ ಕಾನೂನು ಮಾಡುವುದಕ್ಕೆ ಯೋಚನೆ ಮಾಡುತ್ತೀರಾ?

ಅಧ್ಯಕ್ಷರು : ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ

ROAD WORKS IN NORTH KANARA DISTRICT

61. SMT. RADHA BHAT (Ankola).—
Will the Minister for Public Works and Electricity be pleased to state :—

(*a*) the number of years within which the Haldur-Achave Road works in Ankola Taluk of North Kanara District will be completed;

(*b*) the number of years within which Hulekal Dorangere Road repair works in Sirsi Taluk of the said District will be completed;

(*c*) when the repair works of the road of Donagara-Halasagi *via* , Goli in Sirsi Taluk of the said District will be started ?

SRI H. M. CHANNABASAPPA.—(Minister for Public Works and Electricity)

(*a*) It depends upon the financial position

(*b*) The road from Hulekal to Kakkalli is under the control of Public Works Department. The soling work from 13/0 to 20/0 km. on Hulekal-Songimade road is in progress.

(*c*) This is not under the control of Public Works Department.

ಶ್ರೀಮತಿ ರಾಧಾಭಟ್ :— (ಅ) ಪ್ರಶ್ನೆಗೆ ಉತ್ತರವಾಗಿ ಇದು ಹಣಕಾಸಿನ ಪರಿಸ್ಥಿತಿಯನ್ನು ಅವಲಂಬಿಸಿದೆ ಎಂದು ಹೇಳಿದ್ದೀರಿ. ಆದರೆ ಇದು ಎಷ್ಟು ದಿವಸಕ್ಕೆ ಸುಧಾರಿಸುತ್ತದೆ? ಸುಧಾರಿಸಿದ ನಂತರ ಶೀಘ್ರದಲ್ಲೇ ಈ ಕೆಲಸವನ್ನು ಪೂರ್ಣಗೊಳಿಸುತ್ತೀರಾ? ಮತ್ತು ಹಲ್ಲೂರು–ಅಚವೆ ರಸ್ತೆಯ ಕಾಮಗಾರಿ ಕೆಲಸ ಎಲ್ಲಿಯವರೆಗೆ ಬಂದಿದೆ ಎನ್ನುವುದನ್ನು ತಿಳಿಸುತ್ತೀರಾ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ :— ಹಲ್ಲೂರು-ಅಚವೆ ರಸ್ತೆಯ ಕಾಮಗಾರಿ ಕೆಲಸ 4 ಮೈಲಿಯವರೆಗೆ ಮೆಟಲ್ ಮಾಡಿದ್ದಾರೆ. 3 ಮೈಲಿ ಸ್ಕೋರಿಂಗ್ ಅಂಡ್ ಮೆಟಲಿಂಗ್ ಕೆಲಸ ನಡೆಯುತ್ತಾ ಇದೆ. ಇನ್ನು 6 ಮೈಲಿ ಕೆಲಸ ಮೆಗೆದುಕೊಳ್ಳುವುದಕ್ಕೆ ದುಡ್ಡಿನ ಅಭಾವದಿಂದ ಸದ್ಯಕ್ಕೆ ನಿಂತಿದೆ.

ಶ್ರೀಮತಿ ರಾಧಾಭಟ್ :— ಇದನ್ನು ಎಷ್ಟು ದಿನದಲ್ಲಿ ಸುಧಾರಿಸುತ್ತೀವೆಂದು ಹೇಳಲಿಲ್ಲಾ.

ಶ್ರೀ ಹೆಚ್. ಎಂ. ಚೆನ್ನಬಸಪ್ಪ ;-- ಹಣಕಾಸಿನ ಪರಿಸ್ಥಿತಿ ಆಗಿಂದಾಗ್ಗೆ ಸುಧಾರಣೆ ಆದ ಹಾಗೆ ಹೆಚ್ಚು ಖರ್ಚು ಮಾಡುತ್ತೇವೆ. ಹಣಕಾಸಿನ ಪರಿಸ್ಥಿತಿ ಕಡಿಮೆ ಆದಾಗ ಕಡಿಮೆ ಖರ್ಚು ಮಾಡುತ್ತೇವೆ ಆದರೆ ಈ ಬಗ್ಗೆ ಇಷ್ಟೇ ದಿನದಲ್ಲಿ ಸುಧಾರಿಸುತ್ತೆವೆಂದು ಹೇಳುವುದಕ್ಕಾಗುವುದಿಲ್ಲ

ಶ್ರೀಮತಿ ರಾಧಾಭಟ್ :— (ಸಿ) ಪ್ರಶ್ನೆಗೆ ಉತ್ತರವಾಗಿ ಇದು ಲೋಕೋಪಯೋಗಿ ಇಲಾಖೆ ವಶದಲ್ಲಿಲ್ಲ ಎಂದು ಹೇಳಿದ್ದೀರಿ. ಇದನ್ನು ಶೀಘ್ರದಲ್ಲೇ ತೆಗೆದುಕೊಂಡು ಈ ರಸ್ತೆಯ ಕಾಮಗಾರಿ ಕೆಲಸವನ್ನು ಪ್ರಾರಂಭ ಮಾಡುತ್ತೀರಾ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ :— ಈ ರಸ್ತೆ ಸುಮಾರು 17½ ಕಿಲೋ ಮೀಟರ್ ಇದೆ. ಇದು ಸಧ್ಯದಲ್ಲಿ ಪಿ. ಡಬ್ಲು. ಡಿ. ರಸ್ತೆ ಆಗಿಲ್ಲ. ಇದನ್ನು ರಿಪೇರಿ ಮಾಡಬೇಕಾದರೆ 8-9 ಲಕ್ಷ್ ರೂಪಾಯಿ ಬೇಕಾಗುತ್ತದೆ. ಮತ್ತು ಇದನ್ನು ಪಿ. ಡಬ್ಲು. ಡಿ. ರಸ್ತೆಗೆ ಸೇರಿಸಬೇಕಾದರೆ ಕೆಲವು ನಿಯಮಾವಳಿಗಳು ಇವೆ. ಆ ನಿಯಮಾವಳಿಗಳನ್ನು ಅನುಸರಿಸಿ ಪಿ. ಡಬ್ಲು. ಡಿ. ರಸ್ತೆಗೆ ಸೇರಿಸಿಕೊಳ್ಳುವ ಕಾಲ ಬಂದಾಗ ಇದನ್ನೂ ಕೂಡ ಪರಿಶೀಲನೆ ಮಾಡುತ್ತೇನೆ.

ಶ್ರೀ. ಎಂ. ಹೆಚ್. ಜಯಪ್ರಕಾಶನಾರಾಯಣ್ :— ಸ್ವಾಮಿ, ಮಲೆನಾಡು ಪ್ರದೇಶದಲ್ಲಿ ರಸ್ತೆ ವ್ಯವಸ್ಥೆ ಬಹಳ ಹಿಂದುಳಿದಿದೆ. ಆದರಲ್ಲೂ ಶಿರಸಿ ತಾಲ್ಲೂಕಿನಲ್ಲಿ ಹುಲೇಕಲ್-ದೋರಣಗಿರಿ ರಸ್ತೆ ಎನ್ನುವುದನ್ನು 6 ವರ್ಷದಿಂದಲೂ ಕೂಡ ಒತ್ತಾಯ ಮಾಡುತ್ತಿದ್ದರೂ ಸಹ ಇನ್ನೂ ಪೂರ್ಣವಾಗಿಲ್ಲ. ಅದುದರಿಂದ ಇದಕ್ಕೆ ವಿಶೇಷ ರಿಯಾಯಿತಿ ಕೊಟ್ಟು ಈ ಕೆಲಸವನ್ನು ಜಾಗ್ರತೆ ಮಾಡಿಸಿಕೊಡುತ್ತೀರಾ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ :-- ದೇಶದಲ್ಲಿ ರಸ್ತೆಗಳ ಪ್ರಾಮುಖ್ಯತೆ ಹೆಚ್ಚಿಗೆ ಆಗಬೇಕು ಮತ್ತು ಅದರಲ್ಲೂ ಮಲೆನಾಡಿನಲ್ಲಿ ಹೆಚ್ಚು ಮಳೆಬೀಳತಕ್ಕ ಭಾಗದಲ್ಲಿ ರಸ್ತೆಗಳ ಮತ್ತು ಸೇತುವೆಗಳ ಕೆಲಸ ಹೆಚ್ಚಿಗೆ ಆಗಬೇಕು ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಎಲ್ಲವನ್ನೂ ಏಕಕಾಲದಲ್ಲಿ ಮಾಡುವುದು ಕಷ್ಟ. ಈ ಬಗ್ಗೆ ಒಂದು ಫೇಸ್ಡ್ ಪ್ರೋಗ್ರಾಂ ಹಾಕಿಕೊಂಡು, ಹಣಕಾಸಿನ ಪರಿಸ್ಥಿತಿ ನೋಡಿಕೊಂಡು ಕೆಲವು ನಿರ್ದಿಷ್ಟ ಕಾಲದೊಳಗೆ ಇವೆಲ್ಲವನ್ನೂ ಉತ್ತಮ ಪಡಿಸಬೇಕೆಂಬುದು ಸರ್ಕಾರದ ಆಶಯವಾಗಿದೆ.

ಶ್ರೀ ಎಂ. ಎಸ್ ಕೃಷ್ಣನ್ :— ಸ್ವಾಮಿ (ಸಿ) ಗೆ ಉತ್ತರವಾಗಿ ಇದು ಲೋಕೋಪಯೋಗಿ ಇಲಾಖೆ ವಶದಲ್ಲಿಲ್ಲ ಎಂದು ಹೇಳುತ್ತಿದ್ದೀರಿ. ಆದರೆ ಇದಕ್ಕೆ ಒಂದು ವಿಶ್ಲೇಷಣೆಕೊಟ್ಟು ಆರ್ಥಿಕ ಪರಿಸ್ಥಿತಿ ಅನುಕೂಲವಾದಹಾಗೆಲ್ಲಾ ಅನುಕೂಲವಾಗುತ್ತದೆ ಎಂದು ಹೇಳಿದ್ದೀರಿ. ಈರೀತಿ ಒಂದು ವಿಶ್ಲೇಷಣೆ ಕೊಟ್ಟಿರುವುದರಿಂದ ಈಗ ತಾವು ತೆಗೆದುಕೊಂಡಿರುವ ತೀರ್ಮಾನದ ಪ್ರಕಾರ ಈಗಿನ ಎಕ್ಸಾನಮಿ ಆರ್ಡರ್‌ನಿಂದ ಯಾವ ಕಾಮಗಾರಿ ಕೆಲಸವಾಗಲಿ, ರಿಪೇರಿಯಾಗಲಿ ಆಗಕೂಡದು ಎನ್ನುವುದು ಅರ್ಥವಾದಂತಾಗುವುದಿಲ್ಲವೇ ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ :— ರಸ್ತೆ ಕಾಮಗಾರಿ ಕೆಲಸಗಳು ಆಗ ಕೂಡದು ಎಂದು ತೀರ್ಮಾನ ತೆಗೆದುಕೊಂಡಿಲ್ಲ. ಇರತಕ್ಕ ದುಡ್ಡಿನಲ್ಲಿ ಯಾವುದಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕು, ಯಾವುದಕ್ಕೆ ಕಡಿಮೆ ಪ್ರಾಮುಖ್ಯತೆ ಕೊಡಬೇಕು ಎನ್ನುವುದು ಅಷ್ಟೇ ಇರುವುದು.

KALASA—MAGUNDI—BALEHONNUR ROAD

65. SR G. PUTTASWAMY (Mudigere).—

16. Will the the Minister for Public Works and Electricity be pleased to state :—

a) whether it is a fact that on Kalasa –Magundi—Balehonnur road in Mudigere taluk pits have been formed due to recent rainfall ;

(*b*) if so, whether it has come to the notice of the Government that inconvenience has been caused to vehicular traffic on this road ;

(*c*) if so, when this road repair work will be under taken ?